ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್,—ಭದ್ರಾವತಿ ಟೌನ್‌ನಲ್ಲಿ ಮಾರ್ಕೆಂಟಿಂಗ್ ಸೊಸೈಟಿಗೆ ೮೦೦ ಟನ್ ಅಲಾಟ್ ಮಾಡಿದಿರಿ. ೫೦೦ ಟನ್ ಲ್ಯಾಪ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ಆದುದರಿಂದ ಆ ಸೊಸೈಟಿಯನ್ನು ಕ್ಯಾನ್ಸಲ್‌ಮಾಡಿ ಬೇರೆಯವರಿಂದ ವಿತರಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ತಾವು ಹೇಳಿದ ಅಂಶವನ್ನು ವಿಚಾರ ಮಾಡುತ್ತೇನೆ.

SRI ABDUL KHUDUS ANWAR.—It is on account of them that this trouble started ; because they have not lifted quantity in full in the required time 500 tons of fertilizers have lapsed, Will you kindly stop their quota and arrange to distribute it by some other source ?

SRI H.M. CHANNABASAPPA,—I would understand the feeling of the hon. Member. If any society has committed any lapse, we would certainly go into it and see that the matter is set-right.

MONEY ADVANCED TO CONTRACTORS OF KALI RIVER PROJECT

178. SRI KAGODU THIMMAPPA (Sagar).—Will the Minister for Public Works and Electricity be pleased to state :—

(*a*) the contractors to whom the tunnel works of Kali River Project is entrusted.

(*b*) whether it is a fact that the Government has advanced money to the contractors in respect of the work, if so, the special reasons therefor.

(*c*) the members of the other 'A' clauss contractors working in the Kali River Project and whether any money has been advanced to them ?

SRI H. M. CHANNABASAPPA (Minister for Public Works and Electricity) :

(*a*) The tunnel works of Kalinadi Hydro Electric Project have been entrusted to M/s Thapar Intrafor Company Limited (India) Calcutta-1.

(*b*) Yes. Paid by the Mysore Power Corporation in pursuance of the provisions of the agreement for the worxs.

(*c*) Five "A" class contractors have been entrusted with works in the Kalinadi Hydro Electric Project and none of them have availed the advances provided for in the respective agreemenss executed by them with the Corporation except M/s. Thapar Intrafor Company Limited.

ಉತ್ತರದಲ್ಲಿ ಒಂದು ಕರೆಕ್ಷನ್ ಮಾಡಿಕೊಳ್ಳಬೇಕು. ಥಾಪರ್ ಕಂಪನಿ ಮತ್ತು ಇನ್ನೊಂದು ಕಂಪನಿ ಇದೆ—ಶರಾವತಿ ಕನ್‌ಸ್ಟ್ರಕ್ಷನ್ ಕಂಪನಿ ಇವೆರಡು ಕಂಪನಿಗಳ ಹೊರತು ಬಾಕಿಯವರು ಅಡ್ವಾನ್ಸ್ ತೆಗೆದುಕೊಂಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಾಪರ್ ಕಂಪನಿಯವರು ಆಷ್ಟು ಹಣ ಮುಂಗಡ ಪಡೆದಿದ್ದರು ಮತ್ತು ಶರಾವತಿ ಕನ್‌ಸ್ಟ್ರಕ್ಷನ್ ಕಂಪನಿಯವರು ಎಷ್ಟು ಹಣ ಮುಂಗಡವಾಗಿ ಪಡೆದಿದ್ದಾರೆ ?

† ಶ್ರೀ ಎಚ್.ಎಂ. ಚನ್ನಬಸಪ್ಪ,—ಥಾಪರ್ ಇಂಟರ್‌ಫಾರ್ ಕಂಪನಿಯವರು ಮಿಷನರಿಗಾಗಿ ೪೦ ಲಕ್ಷ ರೂಪಾಯಿ ಕೆಲಸಕ್ಕೋಸ್ಕರ ೪೫ ಲಕ್ಷ ರೂಪಾಯಿಗಳು. ಶರಾವತಿ ಕನ್‌ಸ್ಟ್ರಕ್ಷನ್ ಕಂಪನಿಯವರು ಕೆಲಸಕ್ಕೋಸ್ಕರ ೨ ಲಕ್ಷ ರೂಪಾಯಿಂಗಳು ಪಡೆದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಸ್ವಾಮಿ ಥಾಪರ್ ಇಂಟ್ರಾಪಾರ್ ಕಂಪನಿಯವರ ಜೊತೆಗೆ ಸರ್ಕಾರದವರು ಏನು ಒಪ್ಪಂದ ಮಾಡಿಕೊಂಡಿದ್ದೀರಿ, ಆ ಒಪ್ಪಂದದ ಪ್ರಕಾರ ಅಲ್ಲಿರತಕ್ಕ ಕಾರ್ಮಿಕರಿಗೆ ಬೇಕಾದ ಸೌಲಭ್ಯ ಒದಗಿಸಿಕೊಡಬೇಕು ಎಂದು ಕರಾರಿನಲ್ಲಿ ನಮೂದಾಗಿದೆ. ಹೀಗಿದ್ದರೂ ಕೂಡ ಯಾವುದೇ ಕಾರ್ಮಿಕರಿಗೆ ವ್ಯವಸ್ಥೆ ಮಾಡಿ ಕೊಡದೇ ಇದ್ದರೂ, ಅವರ ಮೇಲೆ ಯಾವ ಕ್ರಮ ಕೈಗೊಂಡಿಲ್ಲ, ಇದಕ್ಕೆ ಕಾರಣ ಏನು ?

ಶ್ರೀ ಎಚ್.ಎಂ. ಚನ್ನಬಸಪ್ಪ.—ತಾವು ಕೇಳಿರತಕ್ಕ ಪ್ರಶ್ನೆ, ಯಾರು ಯಾರಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ಎಂದು ಹಣದ ವಿಷಯ ಕೇಳಿದ್ದೀರಿ. ಇಲ್ಲಿ ಕೇಳತಕ್ಕ ಪ್ರಶ್ನೆ ಕೆಲಸಗಾರರಿಗೆ ಸಂಬಂಧಪಟ್ಟ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ಥಾಪರ್ ಕಂಪನಿಯವರಿಗೆ ಎಷ್ಟು ಪ್ರಮಾಣದ ಹಣ ಗುತ್ತೇದಾರಿಗೆ ವಹಿಸಿಕೊಟ್ಟಿದ್ದೀರಿ. ಹಿಂದೆ ಅವರು ಎಂದಾದರೂ ಕೂಡ ಟನಲ್ ವರ್ಕ್ ಮಾಡಿದ್ದರೆ ? ಮಾಡದೇ ಇದ್ದ ಪಕ್ಷದಲ್ಲಿ ಇವರಿಗೆ ಯಾವ ಅನುಭವವಿಲ್ಲದೆ ಇದ್ದರೂ ಕೂಡ ಟನಲ್ ವರ್ಕ್ ವಹಿಸಿಕೊಟ್ಟ ಉದ್ದೇಶವಾದರೂ ಏನು ? ಸಕಾಲದಲ್ಲಿ ಟನಲ್ ವರ್ಕ್ ಪೂರ್ಣವಾಗುತ್ತದೆ ಎನ್ನುವ ಅಭಿಪ್ರಾಯ ವಿದೆಯೇ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ತಮ್ಮ ಅಭಿಪ್ರಾಯ ತಪ್ಪು. ಟನಲ್ ವರ್ಕ್ ಕೆಲಸದಲ್ಲಿ ಅವರಿಗೆ ಅನುಭವ ಇದೆ. ಕೋಲ್ ಇಂಡಸ್ಟ್ರೀಸ್‌ನಲ್ಲಿ ಬೇಕಾದಷ್ಟು ಟನಲ್ ವರ್ಕ್ ಮಾಡಿದ ಅನುಭವ ಅವರಿಗೆ ಇದೆ. ಆ ಅನುಭವವಿದ್ದುದರಿಂದಲೇ ನಾವು ಅವರ ಯೋಗ್ಯತೆಯನ್ನು ಪರಿಶೀಲನೆ ಮಾಡಿ, ಈ ಕೆಲಸವನ್ನು ಅವರಿಗೆ ವಹಿಸಿಕೊಟ್ಟಿದ್ದು.

ಶ್ರೀ ಟಿ.ಎಂ. ಮಂಜುನಾಥ.—ಇಬ್ಬರು ಏಜೆಂಟ್ಸ್‌ಗೆ ಕೊಟ್ಟಿದ್ದೀರಿ. ಈ ಕಾರ್ಯಕ್ಕೆ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ, ಎಷ್ಟು ಕಾಲ ಕೊಟ್ಟಿದ್ದೀರಿ, ಟೆಂಡರ್ ಎಷ್ಟು ಬಂದಿತು, ಇವರದೇ ಕಡಿಮೆ ಟೆಂಡರೇ ? ನಿಮ್ಮ ಕಂಡೀಷನ್ಸ್ ಫುಲ್‌ಫಿಲ್ ಮಾಡಿದ್ದಾರೆಯೇ, ಅವರ ಎಸ್ಟಿಮೇಟ್ ಹಣ ಎಷ್ಟು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಂಡೀಷನ್ಸ್, ಫುಲಫಿಲ್ ಮಾಡಲಿಕ್ಕೆ ಈಗ ಪ್ರಾರಂಭವಾಗಿ ನಡೆಯುತ್ತಾ ಇದೆ.

ಶ್ರೀ ಟಿ.ಎಂ. ಮಂಜುನಾಥ.—ಸರಿಯಾಗಿ ಕೆಲಸ ನಡೆಯುತ್ತಾ ಇದೆಯೇ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ವಿಧಾಯುಕ್ತ ಕಂಡೀಷನ್ಸ್ ಎಲ್ಲಾ ಫುಲ್‌ಫಿಲ್ ಮಾಡಿ ಕೆಲಸ ನಡೆಯುತ್ತಾ ಇದೆ.

ಶ್ರೀ ಟಿ.ಎಂ. ಮಂಜುನಾಥ.—ಎಸ್ಟಿಮೇಟ್ ಟೆಂಡರ್ ಎಷ್ಟು ಜನ ಹಾಕಿದರು, ಲೋಯಸ್ಟ್ ಟೆಂಡರ್ ಯಾವುದು ?

ಶ್ರೀ ಎಚ್.ಎಂ. ಚನ್ನಬಸಪ್ಪ.—ವಿವರ ಕೇಳಿದರೆ ಕೊಡುತ್ತೇನೆ. Head-way tunnel ಕನ್‌ಸ್ಟ್ರಕ್ಷನ್‌ಗೆ ೮ ಕೋಟಿ, ೧೨ ಲಕ್ಷ ರೂಪಾಯಿ. Construction of surge tank, pressure tunnelಗೆ ೩ ಕೋಟಿ ೮೦ ಲಕ್ಷ ರೂಪಾಯಿ.

ಶ್ರೀ ಕಾಗೋಡು ತಿಮ್ಮಪ್ಪ.—ಥಾಪರ್ ಕಂಪನಿಯವರು ಈ ಕಾಳೀನದಿ ಯೋಜನೆಗೆ ಬರುವುದಕ್ಕಿಂತ ಮುಂಚೆ ರಾಷ್ಟ್ರದ ಯಾವುದಾದರೂ ಒಂದು ಭಾಗದಲ್ಲಿ ಟನಲ್ ವರ್ಕ್ ಮಾಡಿದ್ದರೆ, ಆ ಬಗ್ಗೆ ಏನಾದರೂ ದಾಖಲೆ ಇದೆಯೇ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಕಲ್ಕತ್ತೆಯಲ್ಲಿ ಕೊಲೈರಿ ಟನಲ್‌ವರ್ಕ್ ಮಾಡಿದ ಅನುಭವ ಇದೆ. ಕೋಲ್‌ಮೈನ್ಸ್ ಟನಲ್ ಕೆಲಸ ಮಾಡಿರತಕ್ಕ ಅನುಭವ ಅವರಿಗೆ ಬೇಕಾದಷ್ಟು ಇದೆ.

ಶ್ರೀ ಕೊಣಂದೂರು ಲಿಂಗಪ್ಪ.—ಮಾನ್ಯ ಸಚಿವರು ಮೈನ್ಸ್ ಟನಲ್ ಕನ್ಸ್ಟ್ರಕ್ಷನ್ ಮಾಡಿದ ಅನುಭವ ಇದೆ ಎಂದು ಹೇಳಿದರು. ಅದಕ್ಕೂ ಕಾಳಿನದಿ ಯೋಜನೆಗೂ ಸಂಬಂಧವಿಲ್ಲ. ಇದಕ್ಕೆ ಏನಾದರೂ ಟೆಕ್ನಿಕಲೀ ವ್ಯತ್ಯಾಸ ಇದೆಯೇ ?

ಶ್ರೀ ಎಚ್ ಎಂ. ಚನ್ನಬಸಪ್ಪ —Tunnel work is a technical work. ಕೊಲೈರಿಸ್‌ನಲ್ಲಿ ಮಾಡುವುದು, ಬೇರೆ ಕಡೆ ಮಾಡುವುದು ಹೆಚ್ಚು ಕಡಿಮೆ ಎಲ್ಲಾ ಒಂದೆ. Technique of tunnel work ಅವರಿಗೆ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಥಾಪರ್ ಕಂಪನಿಗೆ ಅಗ್ರಿಮೆಂಟ್ ಪ್ರಕಾರ ಎಷ್ಟು ಹಣವನ್ನು ಕೊಡುವುದಕ್ಕೆ ಅವಕಾಶವಿದೆ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಎಷ್ಟು ಹಣವನ್ನು ಕೊಡತಕ್ಕ ಅವಕಾಶ ಅಗ್ರಿಮೆಂಟ್‌ನಲ್ಲಿದೆ ಅಷ್ಟು ಹಣವನ್ನು ಅವರಿಗೆ ಕೊಟ್ಟಿದ್ದೇವೆ. ಅಗ್ರಿಮೆಂಟಿನಲ್ಲಿರತಕ್ಕ ಪ್ರಕಾರ ಹೊಸ ಮೆಷಿನರಿ ತಂದರೆ ಅವಕ್ಕೆ ೧೦ರಷ್ಟು ಮಂತ್ತು ಹಳೇ ಮೆಷಿನರಿ ತಂದರೆ ೫೦ರಷ್ಟು ಕೊಡತಕ್ಕುದ್ದು ಎಂದು ಇದೆ. ಆ ರೀತಿ ಅವರು ಹೊಸ ಮೆಷಿನರಿ ತಂದುದಕ್ಕೆ ೩೦ ಲಕ್ಷ ರೂಪಾಯಿ ಮತ್ತು ಹಳೇ ಮೆಷಿನರಿಗೆ ೧೫ ಲಕ್ಷ ರೂಪಾಯಿ ಕೊಡಲಾಗಿದೆ. ಇದನ್ನು ಕೊಡುವಾಗ ಮೆಷಿನರಿಯನ್ನು ಆಧಾರವಾಗಿಟ್ಟುಕೊಂಡು ಕೊಟ್ಟಿಲ್ಲ. ಬ್ಯಾಂಕ್ ಗ್ಯಾರಂಟಿ ಇಟ್ಟುಕೊಂಡರೆ ಮೆಷಿನರಿಗಿಂತ ಭದ್ರವಾದುದು ಎಂದು ಬ್ಯಾಂಕ್ ಗ್ಯಾರಂಟಿಯನ್ನು ಇಟ್ಟುಕೊಂಡು ಕೊಟ್ಟಿದ್ದೇವೆ, ಕೆಲಸಕ್ಕೊಸ್ಕರ ೪೦ ಲಕ್ಷ ರೂಪಾಯಿ ಕೊಟ್ಟಿದೆ.

POSTING OF URDU LECTURERS AND TEACHERS

194. SRI ABDUL SUBHAN (Tumkur).—Will the Minister for Education be pleased to state :—

(*a*) whether any representations requesting for the posting of Urdu Lecturers in the Junior Colleges and Teachers in High Schools in the State have been received ;

(*b*) if so, the action taken by the Government in the matter ?

SRI A.R. BADARINARAYANA (Minister for Education).—

(*a*) Yes.

(*b*) The services of all post-graduate teachers in Urdu have been on utilised. Due to dearth of Post-graduates in Urdu, some Junior Colleges are vacant. Now, action is being taken to fill up these posts by utilising the services of teachers who become post graduates during the current year *i.e.* 1973. Candidates from Employment Exchange are also appointed as Lecturers. In respect of high schools the required information is being collected from the various districts and will be made available to the hon'ble member in due course.

There is a small correction to be made in the answer to (*b*). It must be : "The services of all post-graduate teachers is Urdu have been utilised." The second sentence to be corrected as follows :

"Due to dearth of Post-graduates in Urdu, some posts in Junior Colleges are vacant,"